(b) No.

(c) Government do not consider it desirable to grant loans on official branch Policies.

ಶ್ರೀ ಎ. ಮುನಿಯಪ್ಪ.—ನಂಸ್ಥಾನದಲ್ಲಿ ಎಲ್ಲ ಸರ್ಕಾರೀ ನೌಕರರೂ ಇಷ್ಯೂರೆನ್ಸ್ ಮಾಡಬೇಕೆಂಬ ನಿಯಮವಿದೆಯಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು, ಇದೆ.

ಶ್ರೀ ಎ. ಮುನಿಯಪ್ಪ.—ಈ ಅಫಿಷಿಯಲ್ ಬ್ರಾಂಚಿನಲ್ಲಿ ಇಷ್ಯೂರ್ ಮಾಡಿರತಕ್ಕವರು ಎಷ್ಟು ಜನರು ಪಬ್ಲಿಕ್ ಬ್ರಾಂಚಿನಲ್ಲಿಯೂ ಇಷ್ಯೂರ್ ಮಾಡಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಎಷ್ಟು ಜನರು ಮಾಡಿದ್ದಾರೆಂಬ ಲೆಕ್ಕ ಸಿಗುವುದಿಲ್ಲ. ಇದು ಅವರವರ ಇಷ್ಟಾನುಸಾರ ಮಾಡತಕ್ಕ ವಿಚಾರವಾಗಿದೆ.

ಶ್ರೀ ಎ. ಮುನಿಯಪ್ಪ.—ಈ ಅಫಿಷಿಯಲ್ ಬ್ರಾಂಚಿನಲ್ಲಿ ವಿಮೆ ಮಾಡಿರತಕ್ಕವರಿಗೆ ಆ ವಿಮೆ ಮೇಲೆ ಏತ ಕ್ಕಾಗಿ ಸಾಲಕೊಡುವುದಿಲ್ಲವೆಂದು ಹೇಳಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎರಡು ಉದ್ದೇಶದಿಂದ ಹಾಗೆ ಸಾಲಕೊಡುವುದಕ್ಕಾಗುವುದಿಲ್ಲ ವೆಂದು ತಿಳಿಸಲಾಗಿದೆ.

ಶ್ರೀ ಎ. ಮುನಿಯಪ್ಪ.—ಏಕೆ ಕೊಡುವುದಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ಬೇರೆ ಕಾರಣಗಳಿವೆ. ಅದರಿಂದ ಹಾಗೆ ಸಾಲ ಕೊಡುವು ದಕ್ಕಾಗುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಕೆಲವು ಕೆಳ ದರ್ಜೆಯ ನೌಕರರಿಗಾದರೂ ರಿಯಾಯಿತಿ ತೋರಿಸಲು ಆಗುವು ದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಮಾದಾರನ ಸಂಬಂಧಿಗಳಿಗೆ ಇವರ ಉಪಯೋಗವಾಗುವಂತೆ ಮಾಡಲು ಸರ್ಕಾರದವರು ಅಫಿಷಿಯಲ್ ಬ್ರಾಂಚಿನಲ್ಲಿ ವಿಮೆಮಾಡಬೇಕೆಂದು ಹೇಳಿದ್ದಾರೆ. ಇಂಥ ವಿಮೆಯ ಮೇಲೆ ಸಾಲಕೊಡುವುದಕ್ಕೆ ಸಾಧ್ಯವಿಲ್ಲ.

Supply of irrigation electric pumps to Arsikere and Channarayapatna Taluks.

Q.—528. Sri B. CHIKKANNA (Javagal).—

Will the Government be pleased to state:—

(*a*) the number of applications received from Arsikere and Channarayapatna Taluks requesting for the supply of irrigation electric pumps;

(*b*) the number sanctioned at present for each taluk ?

A.—Sri H. SIDDAVEERAPPA (Minister for Home and Industries) [on behalf of Sri K. HANUMANTHAIYA (Chief Minister)].—

(*a*)	Arsikere Taluk ..	68
	Channarayapatna Taluk	25
(*b*)	Arsikere Taluk ..	12
	Channarayapatna Taluk	22

ಶ್ರೀ ಬಿ. ಚಿಕ್ಕಣ್ಣ.—ಅರಸೀಕೆರೆಗೆ ಹೀಗೆ ಕಡಿಮೆ ಯಾಗಿ ಪಂಪುಗಳನ್ನು ಕೊಡಲು ಕಾರಣವೇನು ?

Sri H. SIDDAVEERAPPA.—Arsikere is a distressed area. We will consider about that when we take works for 1953-54. If anything more needs to be done we will certainly attend to it.

ಶ್ರೀ ಬಿ ಚಿಕ್ಕಣ್ಣ.—ಹಾಗೆ ತಾವು ಒದಗಿಸಿರುವ ಪಂಪುಗಳ ಬಾಬಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದೀರಾ?

Mr. SPEAKER.—For those 12 sets.

Constructing a building for new Middle School at Yelahanka.

Q.—348. Sri K. V. BYRE GOWDA (Bangalore North).—

Will the Government be pleased to state:—

(*a*) when the estimate to construct new middle school building at Yelahanka was prepared;

(*b*) its estimated cost;

(*c*) whether it was given to a contractor to proceed with the work;

(*d*) the reasons for not completing the said building ?

A.—Sri A. G. RAMACHANDRA RAO (Minister for Law and Education).—

(*a*) In the year 1949-50 an estimate was prepared. A revised estimate was prepared during 1950-51.

(*b*) (i) According to the original estimate it was Rs. 24,000.

(ii) As per the revised estimate it is Rs. 25,100.

(*c*) No.

(*d*) Does not arise in view of reply to (*c*) above.

ಶ್ರೀ ಕೆ. ವಿ. ಬೈರೇಗೌಡ.—ಈ ಸ್ಕೂಲು ಕಟ್ಟಡ ಮೊದಲು ಮುಸಾಫಿರ್ ಖಾನೆಯಾಗಿತ್ತಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಕೆ. ವಿ. ಬೈರೇಗೌಡ.—ಅಲ್ಲಿ ಬಾಲಕರಿಗೆ ಸ್ಥಳ ಸಾಲದೆ ತರಗತಿಗಳು ಹೊರಗಡೆ ನಡೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಕೆ. ವಿ. ಬೈರೇಗೌಡ.—ಇದನ್ನು ಬೇಗ ಪ್ರಾರಂಭಮಾಡಿ ಮುಗಿಸುವಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—1953-54ರಲ್ಲಿ ಎಂದರೆ ಮುಂದಿನ ಸಾಲಿನಲ್ಲಿ ಆ ಕೆಲಸವನ್ನು ಕೈ ಕೊಳ್ಳುತ್ತೇವೆ.